ಕರ್ನಾಟಕ ಸರ್ಕಾರ
ಕಂದಾಯ ಇಲಾಖೆ



ಸಂಖ್ಯೆ: ಆರ್‌ಡಿ 3 ಡಿಎಸ್‌ಪಿ 2008

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ:06-06-2008.

**ಇಂದ,**
ನಿರ್ದೇಶಕರು,
ಸಾಮಾಜಿಕ ಭದ್ರತೆ ಮತ್ತು ಪಿಂಚಣಿಗಳ
ನಿರ್ದೇಶನಾಲಯ, ಕಂದಾಯ ಇಲಾಖೆ.
ಬೆಂಗಳೂರು.

**ಇವರಿಗೆ,**
ಎಲ್ಲಾ ಜಿಲ್ಲಾಧಿಕಾರಿಗಳು/ಉಪ ವಿಭಾಗಧಿಕಾರಿಗಳು
ತಹಸೀಲ್ದಾರರಿಗೆ.

**ಮಾನ್ಯರೇ,**

**ವಿಷಯ:** ಜನಶ್ರೀ ವಿಮಾ ಯೋಜನೆಯ ಅನುಷ್ಠಾನದ ಮಾರ್ಗಸೂಚಿಗಳನ್ನು ಸಿದ್ದಪಡಿಸಿರುವ ಬಗ್ಗೆ.

**ಉಲ್ಲೇಖ:**ಸರ್ಕಾರದ ಆದೇಶ ಸಂಖ್ಯೆ;ಆರ್‌ಡಿ 25 ಡಿಎಸ್‌ಪಿ 2008, ದಿನಾಂಕ:31/03/2008.

***//***

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖದ ಸರ್ಕಾರಿ ಆದೇಶದಂತೆ ಜನಶ್ರೀ ಯೋಜನೆಯನ್ನು ಜುಲೈ 1ನೇ ತಾರೀಖಿನಿಂದ ರಾಜ್ಯಾದ್ಯಂತ ಜಾರಿಗೊಳಿಸಲು ಸರ್ಕಾರವು ತೀರ್ಮಾನಿಸಿರುವುದರಿಂದ, ಸದರಿ ಯೋಜನೆಯ ಮಾರ್ಗಸೂಚಿಗಳನ್ನು ಪತ್ರದೊಂದಿಗೆ ಲಗತ್ತಿಸಲಾಗಿದೆ. ಅದರಂತೆ ಯೋಜನೆಯನ್ನು ಅನುಷ್ಠಾನಗೊಳಿಸಲು ಕೋರಲಾಗಿದೆ.

ತಮ್ಮ ನಂಬುಗೆಯ

(ಎಂ.ವಿ.ವೀರಭದ್ರಯ್ಯ) 6/6/08
ನಿರ್ದೇಶಕರು
ಸಾಮಾಜಿಕ ಭದ್ರತೆ ಮತ್ತು ಪಿಂಚಣಿಗಳ
ನಿರ್ದೇಶನಾಲಯ, ಕಂದಾಯ ಇಲಾಖೆ.

# ಆಮ್ ಆದ್ಮಿ (ಜನಶ್ರೀ) ವಿಮಾ ಯೋಜನೆಯನ್ನು ಅನುಷ್ಠಾನಗೊಳಿಸುವ ಕುರಿತು ಮಾರ್ಗಸೂಚಿಗಳು

## I. ರಾಜ್ಯ ಮಟ್ಟದ ಸಮಿತಿ:

ರಾಜ್ಯ ಮಟ್ಟದಲ್ಲಿ ಈ ಯೋಜನೆಯ ಉಸ್ತುವಾರಿಗೆ, ಕಂದಾಯ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಕೆಳಕಂಡ ಸಮಿತಿ ರಚಿಸತಕ್ಕದ್ದು.

1) ಎಲ್ಲಾ ಪ್ರಾದೇಶಿಕ ಆಯುಕ್ತರುಗಳು
2) ಜೀವನ್ ಭೀಮಾ ನಿಗಮದ ಕೇಂದ್ರ ಕಛೇರಿಯ ಪ್ರಧಾನ ವ್ಯವಸ್ಥಾಪಕರು
3) ನಿರ್ದೇಶಕರು, ಸಾಮಾಜಿಕ, ಭದ್ರತೆ ಮತ್ತು ಪಿಂಚಣಿಗಳ ನಿರ್ದೇಶನಾಲಯ - ಸದಸ್ಯ ಕಾರ್ಯದರ್ಶಿ

ಪ್ರತಿ ಆರು ತಿಂಗಳಿಗೊಮ್ಮೆ ಈ ಸಮಿತಿ ಸಭೆ ನಡೆಸುತ್ತದೆ.

## II. ನಿರ್ದೇಶಕರು, ಸಾಮಾಜಿಕ, ಭದ್ರತೆ ಮತ್ತು ಪಿಂಚಣಿಗಳ ನಿರ್ದೇಶನಾಲಯ ರವರ ಜವಾಬ್ದಾರಿ:

(1) ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ(NREGA) ರಾಜ್ಯದ ಜಿಲ್ಲೆಗಳಲ್ಲಿ ನೋಂದಾಯಿಸಿರುವ ಕುಟುಂಬಗಳ ಪಟ್ಟಿಯನ್ನು ಸಾಮಾಜಿಕ ಭದ್ರತೆ ಮತ್ತು ಪಿಂಚಣಿಗಳ ನಿರ್ದೇಶನಾಲಯ, ಕಂದಾಯ ಇಲಾಖೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಿಂದ ಪಡೆಯುವುದು ಹಾಗೂ ಅದನ್ನು ತಾಲ್ಲೂಕು ತಹಶೀಲ್ದಾರರುಗಳಿಗೆ ಕಳುಹಿಸುವುದು(ಮೊದಲ ಬಾರಿಗೆ ಮಾತ್ರ)

(2) ನಿರ್ದೇಶಕರು, ಸಾಮಾಜಿಕ, ಭದ್ರತೆ ಮತ್ತು ಪಿಂಚಣಿಗಳ ನಿರ್ದೇಶನಾಲಯ ರವರು ತಾಲ್ಲೂಕು ಗಳಿಗೆ ಗಣಕಯಂತ್ರ ನಿರ್ವಹಣೆ, ಕನ್ಸ್ಯೂಮಬಲ್ಸ್ ಹಾಗೂ ಇನ್ನಿತರ ಸಾದಿಲ್ವಾರು ವೆಚ್ಚಗಳಿಗೆ ಹಣವನ್ನು ಜಿಲ್ಲಾಧಿಕಾರಿಗಳ ಮುಖಾಂತರ ಬಿಡುಗಡೆ ಮಾಡುವುದು.

(3) ಆಮ್ ಆದ್ಮಿ ಯೋಜನೆಯ ಅನುಷ್ಠಾನದ ಬಗ್ಗೆ ತಕ್ಷಣದಿಂದ ಪ್ರಾದೇಶಿಕವಾರು ತಹಶೀಲ್ದಾರರುಗಳ ಒಂದು ಕಾರ್ಯಾಗಾರವನ್ನು ಆಯಾ ಪ್ರಾದೇಶಿಕ ಆಯುಕ್ತರ ನೇತೃತ್ವದಲ್ಲಿ ಜೂನ್ 15ರೊಳಗಡೆ ಏರ್ಪಡಿಸಿ ತರಬೇತಿಯನ್ನು ನೀಡುವುದು.

(4) ಜಿಲ್ಲಾಧಿಕಾರಿಗಳಿಗೆ ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರ ನೀಡುವ ವಿಮಾ ಕಂತನ್ನು ವಿಮಾ ಇಲಾಖೆಗೆ ಬಿಡುಗಡೆ ಮಾಡುವ ಮುಖ್ಯ ಜವಾಬ್ದಾರಿ ನಿರ್ದೇಶನಾಲಯದ್ದಾಗಿರುತ್ತದೆ.

(5) ತಾಲ್ಲೂಕು ಕಛೇರಿಯಲ್ಲಿ ಸ್ಥಾಪಿಸುವ ಸಹಾಯವಾಣಿಗೆ ಬೇಕಾದ ಸೌಲಭ್ಯವನ್ನು ಹಾಗೂ ಆರ್ಥಿಕ ಸಹಾಯವನ್ನು ಒದಗಿಸುವುದು.